ಆಶೀರ್ವಾದ ತೆಗೆದುಕೊ" ಎಂದರು. ಅವಳು, "ಸೀರೆಗಳು..." ಎನ್ನುತ್ತಲೇ ನನಗೆ ನಮಸ್ಕರಿಸಿದಳು. "ತೆಗೆದಿಟ್ಟಿದ್ದೇನೆ. ನಾಳೆ ಬಂದು ತೆಗೆದುಕೊ..." ಎಂದೆ. ಮರುದಿನ ಮನೆಗೆ ಬಂದವಳು ಕುಳಿತು ಹರಟುತ್ತ ಚಾಯ್ ಕುಡಿದಳು. "ನನ್ನ ಪತಿ ಬರುತ್ತಿದ್ದಾನೆ ಕರೆದೊಯ್ಯಲು..." ಎಂದಳು. ಸೀರೆಗಳ ಬ್ಯಾಗನ್ನು ಹೊತ್ತುಕೊಂಡು, "ಅಣ್ಣ ಚೆನ್ನಾಗಿದ್ದಾರೆ. ಅಂಕಲ್ ಚೆನ್ನಾಗಿದ್ದಾರೆ. ನೀವೂ ಚೆನ್ನಾಗಿದ್ದೀರಿ. ಸಬ್ ಅಚ್ಛೆ ಹೈ. ನಾನು ಕೆಲಸ ಮಾಡುವಾಗ ಏನಾದರೂ ತಪ್ಪು ಮಾತನಾಡಿದಲ್ಲಿ ಕ್ಷಮಿಸಿ. ಎಲ್ಲರಿಗೂ ನಮಸ್ತೆ" ಎಂದು ಹೇಳಿ, ಆಳವಾದ ನೆನಪುಗಳನ್ನು ನಮ್ಮಲ್ಲಿ ಉಳಿಸಿ ಹೋದಳು.

ಆದರೆ, ಅವರು ಬಂದು ಕರೆದೊಯ್ಯುವುದು ಅಷ್ಟು ಸುಲಭವಾಗಿರಲಿಲ್ಲ. ಇಷ್ಟು ದೂರ ಬರುವ ಖರ್ಚು... ಅವರಿಗೆ ಹೊರೆಯೇ. ಇನ್ನೊಂದು ವಿಷಯವೆಂದರೆ, ಇವಳು ಇಲ್ಲಿದ್ದಷ್ಟು ದಿನಗಳವರೆಗೆ ಅವರಿಗೆ ಸಂದಾಯವಾಗುತ್ತಿದ್ದ ಹತ್ತು ಸಾವಿರ ರೂಪಾಯಿಗಳು ನಿಂತು ಹೋಗುತ್ತಿದ್ದವು. ಜೊತೆಗೆ ಇವಳ ಬಕಾಸುರನ ಹೊಟ್ಟೆ ತುಂಬಿಸಬೇಕಲ್ಲ... ಅವರು ನೆಪ ಹೂಡಿ ತಳ್ಳುತ್ತಲೇ ಹೋದರು. ತಿಂಗಳುಗಳು ಉರುಳಿದವು. ಕೊರೊನಾದ ಗಲಾಟೆ ಬೇರೆ. ನಂದಿನಿ ವ್ಯಗ್ರಳಾಗಿ ತನ್ನ ದೀದಿಯೊಂದಿಗೆ ಚಿಕ್ಕ ಪುಟ್ಟ ಕಾರಣಗಳಿಗೆ ಜಗಳವಾಡಲು ಆರಂಭಿಸಿದಳು. "ನನ್ನನ್ನು ನನ್ನೂರಿಗೆ ಕಳಿಸಿಬಿಡಿ. ಮಕ್ಕಳನ್ನ... ಅಕ್ಕ, ತಂಗಿಯರನ್ನೆಲ್ಲ ನೋಡಬೇಕು. ಅಲ್ಲಿ ನಾನು ಒಪ್ಪತ್ತುಂಡರೂ ಸಾಕು... ಗಂಜಿ, ನೀರಾದರೂ ಕುಡಿದು ಇದ್ದುಕೊಳ್ಳುತ್ತೇನೆ" ಎನ್ನುವ ಮಟ್ಟಕ್ಕೆ ಬಂದಳು. ಅವರಿಗೂ ಸಾಕಾಗಿತ್ತು. ಕೊರೊನಾದ ಕಬಂಧ ಬಾಹುಗಳು ಕೊಂಚ ಸಡಿಲವಾಗುತ್ತಲೇ ಪ್ರಿಯಂವದಾ ಅವಳನ್ನು ಕರೆದುಕೊಂಡು ತಾವೇ ಹೊರಟರು. ರೈಲಿನಲ್ಲಿ ಟಿಕೆಟ್ ಬುಕ್ ಆಗಿತ್ತು. ಬರುವಾಗ ತಂದಿದ್ದ ಎರಡು ಬ್ಯಾಗ್‌ಗಳು ಮರಿ ಹಾಕಿ ಈಗ ಹತ್ತಾಗಿದ್ದವು. ಅವರಿವರ ಬಳಿ ಕೇಳಿದ ಸೀರೆಗಳೆಲ್ಲ ಅವುಗಳಲ್ಲಿ ಸೇರಿದ್ದವು. ಅಂತೂ ನಮಗೆ ಕೈ ಬೀಸಿದಳು.

ಊರಿಗೆ ಹೋಗಿ ಇಳಿದ ಅನಂತರ ಮೊದಲು ಅವಳ ಮನೆಗೆ ತೆರಳಿ ದುಡ್ಡು ಬಟ್ಟೆಗಳನ್ನೆಲ್ಲ ಕೊಟ್ಟು, ಅವಳನ್ನು ಒಪ್ಪಿಸಿ, ಅನಂತರ ತಮ್ಮ ಬಂಧುಗಳ ಮನೆಗೆ ಪ್ರಿಯಂವದಾ ಹೋದರಂತೆ. ಬಹುಕಾಲದ ಅನಂತರ ಹೋಗಿದ್ದವರು ತಿಂಗಳಿದ್ದರು. ಬೆಂಗಳೂರಿಗೆ ಮರಳುವ ಹಿಂದಿನ ದಿನ ಪೇಟೆಯಲ್ಲಿ ನಂದಿನಿ ಸಿಕ್ಕಿದ್ದಳಂತೆ. ಮತ್ತದೇ ಹಳೆಯ ಅವತಾರದಲ್ಲಿದ್ದಳಂತೆ. ಇವರನ್ನು ಕಂಡೊಡನೆ ಓಡಿ ಬಂದವಳು, "ಇಲ್ಲಿ ಊಟಕ್ಕೇ ತಾತ್ವಾರ. ಮತ್ತೆ ಕರೆದೊಯ್ಯುವಿರಾದರೆ ಬರುತ್ತೇನೆ. ತೆಪ್ಪಗೆ ಇರುತ್ತೇನೆ" ಎಂದಳಂತೆ. ಇವರಿಗೆ ಅನುಕಂಪ ಮೂಡಿದರೂ ತಕ್ಷಣ ಕೈಮುಗಿದುಬಿಟ್ಟರಂತೆ. ಮರಳಿದ ಅನಂತರ ಎಲ್ಲಾ ಹೇಳಿದಾಗ ದಟ್ಟವಾದ ವಿಷಾದ ಕಾಡಿತ್ತು. ವಿಚಿತ್ರ ನಂಬಿಕೆಗಳಲ್ಲಿ ಹೂತು ಹೋದ, ಸಾಮಾಜಿಕ ಸ್ತರಗಳಲ್ಲಿ ಮೇಲೇಳಲು ಇಷ್ಟಪಡದ, ಯಾರೋ ಬಂದು ಉದ್ಧರಿಸುವ ಕನಸು ಕಾಣುತ್ತಾ ಕುಳಿತ ಸಹಸ್ರಾರು ಅಮಾಯಕ ಪುಣ್ಯಕೋಟಿ ಜೀವಗಳ ಪ್ರತಿಬಿಂಬ ಅವಳಲ್ಲಿ ಕಂಡಿದ್ದು ಸುಳ್ಳಲ್ಲ.

## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಪ್ರಬಂಧ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...', 'ಆಕ್ರಮಣ' ಸೇರಿದಂತೆ ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.